# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1108 |
| ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸುವ ದಿನಾಂಕ | 12.03.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರ ಅಬಕಾರಿ ಇಲಾಖೆಯ ಸರಳೀಕರಣ ಮತ್ತು ಸುಧಾರೀಕರಣಕ್ಕೆ ತೆಗೆದುಕೊಂಡಿರುವ ಕ್ರಮಗಳೇನು; ಅಬಕಾರಿ ಸೇವೆಗಳನ್ನು ಸರಳೀಕರಣಗೊಳಿಸಲು ಸರ್ಕಾರ ಜಾರಿಗೊಳಿಸಿರುವ ತಂತ್ರಾಂಶಗಳು ಯಾವುವು; | ಅಬಕಾರಿ ಇಲಾಖೆಯ ಅಬಕಾರಿ ಸೇವೆಗಳನ್ನು 2019 ನೇ ಸಾಲಿನಿಂದ ಆನ್‌ಲೈನ್‌ಗೊಳಿಸಲಾಗಿರುತ್ತದೆ. ಸದರಿ ಆನ್‌ಲೈನ್ ಸೇವೆಗಳನ್ನು Version-1 ಆವೃತ್ತಿಯಲ್ಲಿ 2024ನೇ ಸಾಲಿನವರೆಗೂ ಸಾರ್ವಜನಿಕರಿಗೆ ಸೇವೆಯನ್ನು ನೀಡಲಾಗಿರುತ್ತದೆ.<br><br>ಪ್ರಸ್ತುತ ಹೊಸ ಆವೃತ್ತಿ Version-2 ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸಲಾಗುತ್ತಿದೆ. Ease of Doing Business (EODB) ಅನುಸಾರ ವ್ಯವಹಾರ ಸರಳೀಕರಣಗೊಳಿಸಲು ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೇವೆಗಳನ್ನು ತ್ವರಿತವಾಗಿ ಒದಗಿಸುವ ನಿಟ್ಟಿನಲ್ಲಿ ಎಲ್ಲಾ ಸೇವೆಗಳಿಗೆ ಈ ಹಿಂದೆ ನಿಗಧಿಪಡಿಸಲಾಗಿದ್ದ ಕಾರ್ಯಹರಿವಿನ (Work Flow) ವಿವಿಧ ಹಂತಗಳನ್ನು ಕಡಿತಗೊಳಿಸಲಾಗಿರುತ್ತದೆ. |
| ಆ) | ಅಬಕಾರಿ ಇಲಾಖೆಯು ಹೊಸ ಸನ್ನದುಗಳನ್ನು ಮಂಜೂರಾತಿ ಮಾಡಲು ಮತ್ತು ಸನ್ನದುಗಳ ನವೀಕರಣ ಮಾಡಲು ಆನ್ ಲೈನ್ ಅರ್ಜಿಗಳಿಗೆ ಅವಕಾಶ ಕಲ್ಪಿಸಿದೆಯೇ; ಕಲ್ಪಿಸಿದ್ದಲ್ಲಿ, ಇದರ ವಿವರಗಳನ್ನು ಒದಗಿಸುವುದು; | ಸಾರ್ವಜನಿಕರಿಗೆ ಹೊಸ ಸನ್ನದುಗಳ ಮಂಜೂರಾತಿಗಾಗಿ ಮತ್ತು ಸನ್ನದು ನವೀಕರಣಕ್ಕಾಗಿ ಆನ್‌ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿರುತ್ತದೆ.<br><br>• ಅಬಕಾರಿ ಸೇವೆಗಳನ್ನು 2019 ನೇ ಸಾಲಿನಿಂದ Version-1 ಆವೃತ್ತಿಯಲ್ಲಿ ಆನ್‌ಲೈನ್‌ಗೊಳಿಸಲಾಗಿರುತ್ತದೆ. ಈ ಆವೃತ್ತಿಯನ್ನು ಇನ್ನಷ್ಟು ಉನ್ನತೀಕರಣಗೊಳಸಲು ಹೊಸ ಆವೃತ್ತಿ Version-2 ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಪ್ರಸ್ತುತ ಆವೃತ್ತಿ |

<table>
<tr>
<td></td>
<td></td>
<td>Version-2 ರ ಮೂಲಕ ಅಬಕಾರಿ ಸೇವೆಗಳನ್ನು ಒದಗಿಸಲಾಗುತ್ತಿದೆ.<br>
• ಸನ್ನದು ಮಂಜೂರಾತಿ ಸೇವೆಯನ್ನು ತ್ವರಿತವಾಗಿ ಸಾರ್ವಜನಿಕರಿಗೆ ಒದಗಿಸುವ ಉದ್ದೇಶದಿಂದ 16 ರಿಂದ 07 ಹಂತಗಳಿಗೆ ಕಡಿತಗೊಳಿಸಲಾಗಿರುತ್ತದೆ.<br>
• ಹೊಂದಿಕೊಂಡಂತೆ ಆರ್.ವಿ.ಬಿ ಸನ್ನದುಗಳನ್ನು ಪಡೆಯಲು ಈ ಹಿಂದೆ ಇದ್ದಂತಹ ಹಂತಗಳನ್ನು ಕಡಿತಗೊಳಿಸಿ Auto Generated in Electronic Mode ಮೂಲಕ ಪಡೆಯಲು ಕರಡು ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>
• ಸನ್ನದು ಮಂಜೂರಾತಿ ಮತ್ತು ಸನ್ನದು ನವೀಕರಣ ಶುಲ್ಕಗಳನ್ನು ಆವೃತ್ತಿ Version-2 ತಂತ್ರಾಂಶದಲ್ಲಿ ಆನ್ ಲೈನ್ ಮೂಲಕ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ.<br>
• ಸನ್ನದು ನವೀಕರಣ ಸೇವೆಯನ್ನು ತ್ವರಿತವಾಗಿ ಸನ್ನದುದಾರರಿಗೆ ಒದಗಿಸುವ ಉದ್ದೇಶದಿಂದ ಸನ್ನದು ನವೀಕರಣವನ್ನು 02 ದಿನಗಳೊಳಗಾಗಿ ಅನುಮೋದಿಸಲಾಗುತ್ತಿದೆ.<br><br>
ಸನ್ನದು ಅವಧಿಯನ್ನು ಪ್ರತಿ ವರ್ಷ ಅನ್ವಯವಾಗುವ ನವೀಕರಣ ಶುಲ್ಕಗಳನ್ನು ಪಾವತಿಸುವ ಷರತ್ತಿಗೊಳಪಟ್ಟು 01 ವರ್ಷದಿಂದ 05 ವರ್ಷಗಳಿಗೆ ವಿಸ್ತರಿಸಲಾಗಿರುತ್ತದೆ.</td>
</tr>
<tr>
<td>ಇ)</td>
<td>ರಾಜ್ಯ ಸರ್ಕಾರವು ಅಬಕಾರಿ ಇಲಾಖೆಯ ಸಂಪನ್ಮೂಲ ಕ್ರೋಢಿಕರಣಕ್ಕೆ ತಜ್ಞರ ಸಮಿತಿಯನ್ನು ರಚಿಸಿರುತ್ತದೆಯೇ; ರಚಿಸಿದ್ದಲ್ಲಿ ಯಾವಾಗ ಈ ಸಮಿತಿಯನ್ನು ರಚಿಸಲಾಗಿರುತ್ತದೆ; ಸಮಿತಿಯಲ್ಲಿ ಇರುವ ತಜ್ಞರುಗಳ ವಿವರಗಳನ್ನು ಹಾಗೂ ತಜ್ಞರ ಸಮಿತಿ ನೀಡಿರುವ</td>
<td>ಹೌದು,<br><br>
ಸರ್ಕಾರದ ಆದೇಶ ಸಂಖ್ಯೆ: ಆಇ 45/ಉ.ಕಾ(ಅ ಮತ್ತು ಸಂ)2024, ದಿನಾಂಕ:23.08.2024ರ ಆದೇಶದಲ್ಲಿ ಸಂಪನ್ಮೂಲ ಕ್ರೋಢಿಕರಣ ಸಮಿತಿಯನ್ನು ರಚಿಸಲಾಗಿರುತ್ತದೆ.<br><br>
ಸಮಿತಿಯಲ್ಲಿರುವ ತಜ್ಞರ ವಿವರವು ಈ ಕೆಳಕಂಡಂತಿದೆ.<br>
<table>
<tr><td>1</td><td>ಡಾ. ಕೆ.ಪಿ. ಕೃಷ್ಣನ್, ಐ.ಎ.ಎಸ್. (ನಿ)</td><td>ಅಧ್ಯಕ್ಷರು</td></tr>
<tr><td>2</td><td>ಶ್ರೀ ನಜೀಬ್ ಶಾ</td><td>ಸದಸ್ಯರು</td></tr>
</table></td>
</tr>
</table>

<table>
<tr>
<td></td>
<td>ವರದಿಯ ಪ್ರತಿಯನ್ನು ಒದಗಿಸುವುದು;</td>
<td>
<table>
<tr><td></td><td>ಹಿಂದಿನ ಅಧ್ಯಕ್ಷರು, ಪರೋಕ್ಷ ತೆರಿಗೆ ಮತ್ತು ಸುಂಕಗಳ ಕೇಂದ್ರೀಯ ಮಂಡಳಿ.</td><td></td></tr>
<tr><td>3</td><td>ಡಾ. ಹೆಚ್. ಶಶಿಧರ್, ಐ.ಎ.ಎಸ್. (ನಿ)</td><td>ಸದಸ್ಯರು</td></tr>
<tr><td>4</td><td>ಡಾ. ಕೃಷ್ಣರಾಜು, ಪ್ರೊಫೆಸರ್, ISEC</td><td>ಸದಸ್ಯರು</td></tr>
<tr><td>5</td><td>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ</td><td>ಸದಸ್ಯ ಕಾರ್ಯದರ್ಶಿ</td></tr>
</table>
ಸರ್ಕಾರದ ಅನುಮೋದನೆಯೊಂದಿಗೆ, ಅಬಕಾರಿ ಕ್ಷೇತ್ರದ ಸುಧಾರಣೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಲಹೆ ನೀಡಲು ಸಮಿತಿಯು ಕೆಳಗಿನ ಸಲಹೆಗಾರರನ್ನು ಸಹ ಸೇರಿಸಿಕೊಂಡಿದೆ.
<ol>
<li>ಶ್ರೀ ಅರ್ಬಿಂದ್ ಮೋದಿ, ಐ.ಆರ್.ಎಸ್. (ನಿವೃತ್ತ)<br>ಹಿಂದಿನ ಜಂಟಿ ಕಾರ್ಯದರ್ಶಿ (ತೆರಿಗೆ ನೀತಿ ಮತ್ತು ಕಾನೂನು), ಭಾರತ ಸರ್ಕಾರ.</li>
<li>ಡಾ. ಕೃಷ್ಣರಾಜ್<br>ಸಹಾಯಕ ಪ್ರಾಧ್ಯಾಪಕರು (ಅರ್ಥಶಾಸ್ತ್ರ), ಮಾನವಿಕ ಹಾಗೂ ಸಾಮಾಜಿಕ ವಿಜ್ಞಾನ ವಿಭಾಗ, ಐಐಟಿ ರೂರ್ಕಿ.</li>
<li>ಡಾ. ಅಜಯ್ ಶಾ<br>ಹಿಂದಿನ ಪ್ರಾಧ್ಯಾಪಕರು, NIPFP</li>
</ol>
ಸಮಿತಿಯಿಂದ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.
</td>
</tr>
<tr>
<td>ಈ)</td>
<td>ರಾಜ್ಯದ ಅಬಕಾರಿ ಇಲಾಖೆಯಲ್ಲಿ ಸಿ.ಎಲ್-7 ಸನ್ನದು ಮಂಜೂರಾತಿ ಮಾಡಲು ಇರುವ ಪ್ರಕ್ರಿಯೆಗಳ ವಿಧಾನಗಳೇನು; (ವಿವರಗಳನ್ನು ಒದಗಿಸುವುದು); ಪ್ರಸ್ತುತ ರಾಜ್ಯದಲ್ಲಿ ಇರುವ ಸಿಎಲ್-7 ಸನ್ನದುಗಳು ಎಷ್ಟು</td>
<td>ರಾಜ್ಯದಲ್ಲಿ ಸಿಎಲ್-7 ಪರವಾನಗಿಗಳನ್ನು ನೀಡುವಾಗ ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳ ವಿವರಗಳನ್ನು ಅನುಭಂದ-01ರಲ್ಲಿ ಮತ್ತು ರಾಜ್ಯದಲ್ಲಿರುವ ಸಿಎಲ್-7 ಸನ್ನದುಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-02ರಲ್ಲಿ ಒದಗಿಸಲಾಗಿದೆ.</td>
</tr>
</table>

| | | |
|---|---|---|
| | (ಜಿಲ್ಲಾವಾರು ಮಾಹಿತಿ ಒದಗಿಸುವುದು) | |
| ಉ) | ರಾಜ್ಯದಲ್ಲಿ ಇರುವ ಮೈಕ್ರೋ ಬ್ರೀವರಿ ಸನ್ನದುಗಳು ಎಷ್ಟು ಇವುಗಳನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು?<br>(ಮಂಜೂರಾಗಿರುವ ದಿನಾಂಕ ಮತ್ತು ಸನ್ನದುಗಳ ಪೂರ್ಣ ವಿವರಗಳನ್ನು ಒದಗಿಸುವುದು) | ಪ್ರಸ್ತುತ ರಾಜ್ಯಾದ್ಯಂತ ಒಟ್ಟು 87 ಮೈಕ್ರೋಬ್ರೀವರಿ ಸನ್ನದುಗಳು ಕಾರ್ಯನಿರ್ವಹಿಸುತ್ತಿರುತ್ತಿವೆ. ಮಂಜೂರಾಗಿರುವ ದಿನಾಂಕ ಮತ್ತು ಸನ್ನದುಗಳ ಪೂರ್ಣ ವಿವರಗಳನ್ನು **ಅನುಬಂಧ-03** ರಲ್ಲಿ ಒದಗಿಸಲಾಗಿದೆ.<br><br>ಮೈಕ್ರೋಬ್ರೀವರಿ ಸನ್ನದಿಗೆ ಸಂಬಂಧಿಸಿದಂತೆ – ಮೈಕ್ರೋಬ್ರೀವರಿ ಸನ್ನದನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿರುತ್ತವೆ:-<br><br>ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಗಳು, 1967 ರ ನಿಯಮ 27-ಎ ರನ್ವಯ ಮತ್ತು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ತಿಳಿಸಿರುವ ಆಕ್ಷೇಪಣಾರ್ಹ ಸ್ಥಳಗಳನ್ನು ಪರಿಶೀಲಿಸಿ ಮೈಕ್ರೋಬ್ರೀವರಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತದೆ. ಮೈಕ್ರೋಬ್ರೀವರಿ ಎಂದರೆ 6,500 ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದ ಸ್ಥಳದಲ್ಲಿ ವಿಶಾಲವಾದ ಭೋಜನಶಾಲೆ ಮತ್ತು ಪಾರ್ಕಿಂಗ್ ಸೌಲಭ್ಯದೊಂದಿಗೆ ವರ್ಷಕ್ಕೆ 3,65,000 ಲೀಟರ್ ಸ್ಥಾಪಿತ ಸಾಮರ್ಥ್ಯ ಮೀರದಂತೆ ಇರುವ ಸಣ್ಣ ಬ್ರೀವರಿ, ಇದರಲ್ಲಿ ಡ್ರಾಟ್ ಬಿಯರ್‌ನ್ನು ತಯಾರಿಸಲಾಗುತ್ತದೆ ಮತ್ತು ಆವರಣದೊಳಗೆ ಗ್ರಾಹಕರಿಗೆ ಸೇವನೆಗಾಗಿ ನೀಡಲಾಗುತ್ತದೆ. ಮೈಕ್ರೋಬ್ರೀವರಿ ಯಲ್ಲಿ ಉತ್ಪಾದನೆಗೆ ಬಳಸುವ ಕಚ್ಚಾ ಪದಾರ್ಥಗಳ ಗುಣಮಟ್ಟ ಹಾಗೂ ಉತ್ಪಾದನೆ ಮಾಡಿದ ಎಲ್ಲಾ ಬಗೆಯ ಉತ್ಪನ್ನಗಳು ಮಾನವನ ಸೇವನೆಗೆ ಯೋಗ್ಯವಾಗಿರುವುದನ್ನು ಹಾಗೂ ನಿಗಧಿತ ತೀಕ್ಷಣತೆಯನ್ನು ಹೊಂದಿರುವುದನ್ನು ದೃಢಪಡಿಸಿಕೊಳ್ಳುವ ಸಂಬಂಧ ಮೈಕ್ರೋಬ್ರೀವರಿಗಳು ವಿಜ್ಞಾನ ಪದವಿಯಲ್ಲಿ |

| | | |
|---|---|---|
| | | ರಸಾಯನಶಾಸ್ತ್ರವನ್ನು, ಅದರಲ್ಲೂ, ಆರ್ಗಾನಿಕ ರಸಾಯನಶಾಸ್ತ್ರ ಅಥವಾ ಜೈವಿಕ ರಸಾಯನಶಾಸ್ತ್ರವನ್ನು ಒಂದು ವಿಷಯವನ್ನಾಗಿ ತೆಗೆದುಕೊಂಡು ಅಭ್ಯಸಿಸಿರುವ ಅಥವಾ ಆಲ್ಕೋಹಾಲ್ ತಂತ್ರಜ್ಞಾನದಲ್ಲಿ ಪರಿಣತಿ ಇರತಕ್ಕಂತಹ ರಾಸಾಯನಿಕ ತಜ್ಞರನ್ನೊಳಗೊಂಡ ಸುಸಜ್ಜಿತ ರಾಸಾಯನಿಕ ಪ್ರಯೋಗಾಲಯವನ್ನು ಹೊಂದಬೇಕಿರುತ್ತದೆ. |

ಆಇ 35 ಇಎಲ್‌ಕ್ಯೂ 2026

([illegible])
ಅಬಕಾರಿ ಸಚಿವರು

ಅನುಬಂಧ -1

**ರಾಜ್ಯದಲ್ಲಿ ಸಿಎಲ್-7 ಪರವಾನಗಿಗಳನ್ನು ನೀಡುವಾಗ ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳ ವಿವರಗಳು:**

ಸಿಎಲ್-7 (ಬೋರ್ಡಿಂಗ್ & ಲಾಡ್ಜಿಂಗ್ ಸನ್ನದು) ಸನ್ನದನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3(7) ಮತ್ತು 5 ರಡಿ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ತಿಳಿಸಿರುವ ಆಕ್ಷೇಪಣಾರ್ಹ ಸ್ಥಳಗಳನ್ನು ಪರಿಶೀಲಿಸಿ ಹೊಸದಾಗಿ ಸಿಎಲ್-7 ಸನ್ನದು ಮಂಜೂರು ಮಾಡಲಾಗುತ್ತಿದೆ. ಸಿಎಲ್-7 ಸನ್ನದುಗಳಲ್ಲಿ ಲಾಡ್ಜ್‌ನಲ್ಲಿ ತಂಗುವ ಗ್ರಾಹಕರಿಗೆ ಹಾಗೂ ಅವರ ಅತಿಥಿಗಳಿಗೆ ಹಾಗೂ ರೆಸ್ಟೋರೆಂಟ್‌ಗೆ ಬರುವ ಸಾಂದರ್ಭಿಕ ಸಂದರ್ಶಕರುಗಳಿಗೆ ಊಟದೊಂದಿಗೆ ಮದ್ಯವನ್ನು ಮಾರಾಟ ಮಾಡಲು ಅವಕಾಶವಿರುತ್ತದೆ.

ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 8, 8-ಎ ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಪಾವತಿಸಿಕೊಂಡು ಇದೇ ನಿಯಮ 4 ರಂತೆ ಅರ್ಜಿದಾರರಿಂದ ಸೂಕ್ತ ದಾಖಲಾತಿಗಳೊಂದಿಗೆ ನಮೂನೆ-1ಎ ರಲ್ಲಿ ಅರ್ಜಿಯನ್ನು ಪಡೆಯಲಾಗುತ್ತದೆ. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್ ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.

ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5(1) ರನ್ವಯ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುವ ಸ್ಥಳದಲ್ಲಿ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164-12166/2016 ರ ದಿನಾಂಕ:31-03-2017 ರಲ್ಲಿ ಆದೇಶಿಸಿದಂತೆ 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000 ಮತ್ತು 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.

ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5 ಉಪ ನಿಯಮ(1) ರಲ್ಲಿರುವ ಯಾವುದೂ, 2011ರ ಜನಗಣತಿಯನ್ವಯ 3000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ನಮೂನೆ 6A ಮತ್ತು ನಮೂನೆ-7 ನಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿ ನಿಯಮಗಳು ಅನ್ವಯಿಸುವುದಿಲ್ಲ. ಹಾಗೂ ಇದೇ ಉಪ ನಿಯಮ (2) ಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸರ್ಕಾರಗಳ ಯಾವುದೇ ಕಛೇರಿಯಿಂದ ದೂರದ ಮಾನದಂಡಗಳಿಗೆ ಸಂಬಂಧಿಸಿದಂತೆ ಉಪ ನಿಯಮ (1) ರಲ್ಲಿರುವ ಯಾವುದೂ, ಮಹಾನಗರ ಮಿತಿಯೊಳಗೆ ನಮೂನೆ ಸಿಎಲ್-4, ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ರಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ಅನ್ವಯಿಸುವುದಿಲ್ಲವೆಂದು ಹಾಗೂ ಮಹಾನಗರ ಮಿತಿಯೊಳಗೆ ಅಸ್ತಿತ್ವದಲ್ಲಿರುವ ನಮೂನೆ ಸಿಎಲ್-4, ನಮೂನೆ ಸಿಎಲ್-6ಎ ಮತ್ತು ನಮೂನೆ ಸಿಎಲ್-7 ಸನ್ನದುಗಳಿಗೆ ಅನ್ವಯಿಸುವುದಿಲ್ಲ ಮತ್ತು ಅಂತಹ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗಿರುತ್ತದೆ.

ಸಿಎಲ್-7 ಮಂಜೂರು ಮಾಡಲು ಬೃಹತ್ / ಮಹಾನಗರ ಪಾಲಿಕೆಗಳಲ್ಲಿ 15 ಡಬಲ್ ರೂಂ ಹಾಗೂ ಇತರೆ ಪ್ರದೇಶದಲ್ಲಿ 10 ಡಬಲ್ ರೂಂ ಅನ್ನು ಕಟ್ಟಡದಲ್ಲಿ ಹೊಂದಿರಬೇಕು.

ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗುತ್ತಿದೆ.

ಈ ಮೂಲ ಸೌಕರ್ಯಗಳ ಪೈಕಿ ಸಿಎಲ್-7 ಸನ್ನದಿನ ಕಟ್ಟಡದಲ್ಲಿ ಎರಡು ಹಾಸಿಗೆಗಳಿರುವ (Double Bedded) ಹಾಗೂ ಶೌಚಾಲಯದ ವ್ಯವಸ್ಥೆಯಿರುವ ಕೊಠಡಿಗಳ ಬಗ್ಗೆ ಹಾಗೂ ಸನ್ನದಿನ ಆವರಣದಲ್ಲಿ ವಾಹನಗಳ ನಿಲುಗಡೆಗಾಗಿ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ.

ಸನ್ನದು ಮಂಜೂರಾತಿ ಸಂಬಂಧ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಪೂರ್ವದಲ್ಲಿಯೇ ಅರ್ಜಿದಾರರು ಅರ್ಜಿಯೊಂದಿಗೆ ಸಲ್ಲಿಸಿರುವ ಎಲ್ಲಾ ವಿವರಗಳ ಬಗ್ಗೆ ವಿಚಾರಣೆ ಮಾಡುವ ವಿವೇಚನಾಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿದ್ದು, ಸನ್ನದನ್ನು ನೀಡುವ ಸಂಬಂಧ ಯಾವುದೇ ಆಕ್ಷೇಪಣೆಗಳು ಇಲ್ಲದಿರುವ ಬಗ್ಗೆ ಮನದಟ್ಟು ಮಾಡಿಕೊಂಡ ನಂತರವೇ ಸನ್ನದು ಮಂಜೂರಾತಿಗೆ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳೇ ಉಳ್ಳವರಾಗಿರುತ್ತಾರೆ. ಸದರಿಯವರ ಅಂತಹ ಶಿಫಾರಸ್ಸನ್ನು ಪರಿಗಣಿಸಿ, ಸನ್ನದು ಮಂಜೂರಾತಿಗೆ ಪೂರ್ವಾನುಮತಿ ನೀಡುವ ಅಧಿಕಾರವು ಅಬಕಾರಿ ಆಯುಕ್ತರಿಗೆ ದತ್ತವಾಗಿದ್ದು, ಪೂರ್ವಾನುಮತಿ ದೊರೆತ ನಂತರದಲ್ಲಿ ಸನ್ನದನ್ನು ಮಂಜೂರು ಮಾಡುವ ವಿವೇಚನಾಧಿಕಾರವು ಸಹ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುತ್ತದೆ.

**FD/35/ELQ/2026**

ಅನುಬಂಧ-02

ಸಿಎಲ್-7 ಸನ್ನದುಗಳ ವಿವರ

| ಕ್ರ.ಸಂ | ಜಿಲ್ಲೆ | ದಿನಾಂಕ:28-02-2026 ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ಸಿಎಲ್-7 ಸನ್ನದುಗಳ ಸಂಖ್ಯೆ |
|---|---|---|
| 1 | 2 | 3 |
| 1 | ಬೆಂಗಳೂರು ನಗರ ಜಿಲ್ಲೆ-01 | 120 |
| 2 | ಬೆಂಗಳೂರು ನಗರ ಜಿಲ್ಲೆ-02 | 171 |
| 3 | ಬೆಂಗಳೂರು ನಗರ ಜಿಲ್ಲೆ-03 | 157 |
| 4 | ಬೆಂಗಳೂರು ನಗರ ಜಿಲ್ಲೆ-04 | 47 |
| 5 | ಬೆಂಗಳೂರು ನಗರ ಜಿಲ್ಲೆ-05 | 57 |
| 6 | ಬೆಂಗಳೂರು ನಗರ ಜಿಲ್ಲೆ-06 | 94 |
| 7 | ಬೆಂಗಳೂರು ನಗರ ಜಿಲ್ಲೆ-07 | 59 |
| 8 | ಬೆಂಗಳೂರು ನಗರ ಜಿಲ್ಲೆ-08 | 238 |
| 9 | ಬೆಂಗಳೂರು ಗ್ರಾಮಂತರ | 160 |
| 10 | ಚಿಕ್ಕಬಳ್ಳಾಪುರ | 81 |
| 11 | ಕೋಲಾರ | 145 |
| 12 | ರಾಮನಗರ | 60 |
| 13 | ತುಮಕೂರು | 159 |
| 14 | ಬಾಗಲಕೋಟೆ | 83 |
| 15 | ಬೆಳಗಾವಿ ಉತ್ತರ | 79 |
| 16 | ಬೆಳಗಾವಿ ದಕ್ಷಿಣ | 54 |
| 17 | ಬಿಜಾಪುರ | 57 |
| 18 | ಧಾರವಾಡ | 59 |
| 19 | ಹಾವೇರಿ | 41 |
| 20 | ಬೀದರ್ | 51 |
| 21 | ಕಲಬುರಗಿ | 99 |
| 22 | ರಾಯಚೂರು | 60 |
| 23 | ಯಾದಗಿರಿ | 33 |
| 24 | ಬಳ್ಳಾರಿ | 36 |
| 25 | ವಿಜಯನಗರ | 24 |
| 26 | ಚಿತ್ರದುರ್ಗ | 37 |
| 27 | ದಾವಣಗೆರೆ | 24 |
| 28 | ಗದಗ | 48 |
| 29 | ಕೊಪ್ಪಳ | 64 |
| 30 | ದಕ್ಷಿಣ ಕನ್ನಡ | 129 |
| 31 | ಕೊಡಗು | 63 |
| 32 | ಶಿವಮೊಗ್ಗ | 83 |
| 33 | ಉಡುಪಿ | 124 |
| 34 | ಉತ್ತರ ಕನ್ನಡ | 36 |
| 35 | ಚಾಮರಾಜನಗರ | 41 |
| 36 | ಚಿಕ್ಕಮಗಳೂರು | 62 |
| 37 | ಹಾಸನ | 275 |
| 38 | ಮಂಡ್ಯ | 116 |
| 39 | ಮೈಸೂರು ನಗರ | 109 |
| 40 | ಮೈಸೂರು ಗ್ರಾಮಾಂತರ | 168 |
| ಒಟ್ಟು | | 3603 |

ಆಇ 35 ಇಎಲ್‌ಕ್ಯೂ 2026

| | | | | |
|---|---|---|---|---|
| 73 | ಬೆಂಗಳೂರು ನಗರ ಜಿಲ್ಲೆ-07 | | ಲೋಕೇಶ್ ಹಾಸ್ಪಿಟಾಲಿಟಿ ಸರ್ವೆ ನಂ 310/35, ನೆಲಮಹಡಿ ಮೆಜ್ಜನೈನ್ ಮಹಡಿ, ಕಾಡುಬೀಸನಹಳ್ಳಿ ಗ್ರಾಮ, ಬೆಳಂದೂರು ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕ್ | ಎಕ್ಸೈಜ್-18015 / 12/2025 ದಿ. 25.08.2025 |
| 74 | ಬೆಂಗಳೂರು ನಗರ ಜಿಲ್ಲೆ-07 | | ದಿ ಅಂಡ್ ಸ್ನು ಪ್ರೈವೇಟ್ ಲಿಮಿಟೆಡ್, ಸರ್ವೆ ನಂ.37/1, ಖಾತಾ ನಂ.148, ನೆಲಮಹಡಿ 1 ಮತ್ತು 2ನೇ ಮಹಡಿ, ಕಾಡುಬೀಸನಹಳ್ಳಿ ವಿಲೇಜ್ ಮಾರತಹಳ್ಳಿ ಬೆಂಗಳೂರು | ಎಸ್ ಸಿ ಎ/21/2025-26 00006/ ದಿ 10 12 2025 |
| 75 | ಬೆಂಗಳೂರು ನಗರ ಜಿಲ್ಲೆ-08 | | ಸಂತೋಷ್ ಶ್ರೀರಾಮ್ ಆರ್ ಆರ್ ಬ್ರುಕ್ಸ್ ಬಾರ್ ಅಂಡ್ ರೆಸ್ಟೋರೆಂಟ್, ನಂ 35/38, 24ನೇ ಮೈನ್ ರಸ್ತೆ, ಪುಟ್ಟೇನಹಳ್ಳಿ, ಜೆ.ಪಿ.ನಗರ 7ನೇ ಫೇಸ್, ಬೆಂಗಳೂರು ದಕ್ಷಿಣ, ಬೆಂಗಳೂರು-76. | ಇಸಿಬಿ/58/ಮೈಕ್ರೋ ಬ್ರೀವರಿ/ಬೆಂಗಳೂರು/2018-19 ದಿ.28 09 2018 |
| 76 | ಬೆಂಗಳೂರು ನಗರ ಜಿಲ್ಲೆ-08 | | ಶ್ರೀಮತಿ.ಭಾಗ್ಯಮ್ಮ, ಐರನ್ ಹಿಲ್ ಬಾರ್ ಅಂಡ್ ರೆಸ್ಟೋರೆಂಟ್, ಸಂಖ್ಯೆ 4ಎಫ್ 419, 4ನೇ ಮಹಡಿ ಫೋರಂ ಸಾಲ್ಮನ್ ಸಿಟಿ, ನಂ.31, ಕನಕಪುರ ರಸ್ತೆ, ಬೆಂಗಳೂರು-560062 | ಎಕ್ಸೈಸ್ /18015/28/2024 ದಿ:08.10.2024 |
| 77 | ಬೆಂಗಳೂರು ನಗರ ಜಿಲ್ಲೆ-08 | | ಕ್ಯ ಬ್ರೀವ್ (ಪಾಲುದಾರರು ಶ್ರೀ ಎಸ್.ಚಿಟಂದ್ರಶೇಖರ್ ಮತ್ತು ಶ್ರೀಮತಿ.ಎಸ್ ಅಮುತ) ಕಟ್ಟಡ ಸಂಖ್ಯೆ:01, 165/6, ದೊರಸಾನಿಪಾಳ್ಯ, ವೆಂಕಟಾದ್ರಿ ಲೇಔಟ್, ಕೃಷ್ಣರಾಜಂ ಲೇಔಟ್, 940/1037/103/ 2941/88/ 165/6-1, ಪುಟ್ಟೇನಹಳ್ಳಿ, ಬೆಂಗಳೂರು | ಎಕ್ಸೈಸ್ /18015/6/2025 ದಿ.14 03.2025 |
| 78 | ಬೆಂಗಳೂರು ನಗರ ಜಿಲ್ಲೆ-08 | | ಶ್ರೀ ಆರ್.ಆರ್.ಸಂತೋಷ್ ಶ್ರೀರಾಮ್, ಆರ್ ಆರ್ ಹಾಸ್ಪಿಟಾಲಿಟಿ, ನಂ.4/ಎ2, ಕೊತ್ತನೂರು ಮುಖ್ಯರಸ್ತೆ, ಪುಟ್ಟೇನಹಳ್ಳಿ, ಜೆ.ಪಿ ನಗರ 7 ಫೇಸ್ ಬೆಂಗಳೂರು-560078 | ಎಸ್ ಸಿ/021/2025-26/00004 ದಿ.09.09.2025 |
| 79 | ಬೆಂಗಳೂರು ನಗರ ಜಿಲ್ಲೆ-08 | 8 | ಫರ್ಸ್ಟ್ ಕಾರ್ಟೆಲ್ ಹಾಸ್ಪಿಟಾಲಿಟಿ ಎಲ್‌ಎಲ್‌ಪಿ, (ಪಾಲುದಾರರು :- ಶ್ರೀ ಎಂ ಕಿರಣ್ 2 ಶ್ರೀ ಆನಂದ ಎಸ್ 3.ಶ್ರೀ ಅರ್ಜುನ್ ಬಿ ಶೆಟ್ಟಿ ಮತ್ತು 4ಶ್ರೀ ಗೌತಮ್ ಗಂಗಾಧರ್) ಕಟ್ಟಡ ಸಂ.17/152/5, 4ನೇ ಮಹಡಿ, ನೀಲಾದ್ರಿರಸ್ತೆ, ದೊಡ್ಡತೋಗೂರು, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು | ಇಸಿಬಿ/ಎಂಬಿ/29/ ಬೆಂಗಳೂರು(ಸೌತ್)/2019-20 ದಿನಾಂಕ 31/08/2019 |
| 80 | ಬೆಂಗಳೂರು ನಗರ ಜಿಲ್ಲೆ-08 | | (ಪಾಲುದಾರರು ಶ್ರೀ.ಸಂತೋಷ್ ಹೆಚ್ ಎಮ್ ಮತ್ತು ಶ್ರೀ ಕಡಶ್ ರಾಜೇಶ್) ಲಾಕಾಮಾ ಎಂಟರ್ ಪ್ರೈಸಸ್, ಲಾಕಾಸ ಬ್ರೀವರಿ, ನಂ.877/1,878/2,895/19,896/20, 1&2 ನೇ ಮಹಡಿ, ಬ್ಲೂಮಿಂಗ್ ಡೇಲ್ ಕಸವನಹಳ್ಳಿ, ಕಾರ್ಮೆಲರಾಮ್ ಅಂಚೆ ಬೆಂಗಳೂರು | ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ರವರ ಆದೇಶ ಸಂಖ್ಯೆ ಇಸಿಬಿ/ಎಂ.ಬಿ/18/ಬೆಂಗಳೂರು(ದಕ್ಷಿಣ)/2017-18 ದಿ:12.09.2017 |
| 81 | ಬೆಂಗಳೂರು ನಗರ ಜಿಲ್ಲೆ-08 | | 1. ಪ್ರಶಾಂತ್ ಕುನಾಲ್, 2.ಅಕಿತಾ ಛಡ್ಡಾ, 3. ಕೆ ಎಸ್. ಹೇಮಂತ್ ಜ್ಯೋತಿ ಟೇಲ್ಸ್ ಬ್ರೀವಿಂಗ್ ಎಲ್‌ಎಲ್‌ಪಿ, ಡೆಸಿಗ್ನೇಟೆಡ್ ಪಾಲುದಾರರು, ಕಟ್ಟಡ ಸಂ 138/52, 139/52, 137/50, 136/52, ನಂ. 108/49/1, 49/2, 50, 52 ದೊಡ್ಡಕನ್ನಳ್ಳಿ, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು-560035 | ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ರವರ ಆದೇಶ ಸಂಖ್ಯೆ EXCISE-18015/22/2024 ದಿ.24.07.2024 |
| 82 | ಬೆಂಗಳೂರು ನಗರ ಜಿಲ್ಲೆ-08 | | ಹೈಪರಿಯನ್ ಹಾಸ್ಪಿಟಾಲಿಟಿ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ (ನಿರ್ದೇಶಕರು ಶ್ರೀ ಪ್ರಸಾದ್ ರಾಮಪ್ಪ ಮತ್ತು ಶ್ರೀ ಧನಶೇಖರ್ ರೆಡ್ಡಿ ಬಿಎನ್) ಹೈಪರಿಯನ್ ಹಾಸ್ಪಿಟಾಲಿಟಿ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಸರ್ವೆ ನಂ 41/9, ಖಾತ ನಂ. 154/41/9, ನೆಲಮಹಡಿ, 1ನೇ ಮಹಡಿ ಮತ್ತು 2ನೇ ಮಹಡಿ, ದೊಡ್ಡಕನ್ನಲಿ, ಸರ್ಜಾಪುರ ಮುಖ್ಯ ರಸ್ತೆ, ಕಾರ್ಮೆಲರಾಮ್ ಬೆಂಗಳೂರು-560035 | ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ರವರ ಆದೇಶ ಸಂಖ್ಯೆ EXCISE-18015/38/2024 ದಿ 30 12 2024 |
| 83 | ಬೆಳಗಾವಿ ದಕ್ಷಿಣ | 1 | M/s ಹಾಪ್‌ವರ್ಕ್ಸ್ ಬ್ರೂಯಿಂಗ್ ಕಂಪನಿ, ಬ್ಲ್ಯಾ 59 (ಪಾಲುದಾರರು: (1) ಅಮೃತ್ ರಾಜಾಪುರ-50% (2) ಸ್ತುತಿ ಎಸ್ ಪಾಟೀಲ್-50%) CTS ನಂ.4836/1/C, ತರುಣ್ಸ್ ಆರ್ಕೇಡ್ ಬಿಲ್ಡಿಂಗ್, 3ನೇ ಮತ್ತು 4ನೇ ಮಹಡಿ, ಸಿವಿಲ್ ಆಸ್ಪತ್ರೆ ರಸ್ತೆ, ಸದಾಶಿವ ನಗರ, ಬೆಳಗಾವಿ | ಎಕ್ಸೈಜ್-18015 /82/2020 ದಿ: 19.01 2021 |
| 84 | ದಕ್ಷಿಣ ಕನ್ನಡ | 1 | ಶ್ರೀ.ಅಶ್ವಿನ್ ರೈ, ಮ್ಯಾನೇಜಿಂಗ್ ಪಾರ್ಟನರ್, ನಿಧಿ ಇನ್‌ವೆಸ್ಟ್‌ಮೆಂಟ್ಸ್, ನಂ:ಎಫ್‌ಎಫ್-02, ಸೆಂಟ್ರಲ್ ಅವೆನ್ಯೂ ಬಿಲ್ಡಿಂಗ್, 2ನೇ ಮೈನ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು ಕಟ್ಟಡ ಸಂ: 2-17-1508/41 ರಿಂದ 48, 2-17-1508/49, 2-17-1508/ 49ಎ ಭಾರತ್ ಮಾಲ್ ಬಿಜೈ ರಸ್ತೆ, ಮಂಗಳೂರು | ಇಸಿಬಿ/39/ಮೈಕ್ರೊ.ಬ್ರೆವರಿ/ಮಂಗಳೂರು/2015-16 ದಿ: 23-12-2015 |
| 85 | ಮೈಸೂರು ನಗರ ಜಿಲ್ಲೆ | 2 | ಶ್ರೀಯುತ ಎಸ್. ಸಾಧನಾ, ಪ್ರೊಪ್ರೈಟರ್, ಮೈಕ್ರೋಬ್ರೀವರಿ, ಮೆ: ಸ್ವರ್ಣ ಫುಡ್ಸ್ ಅಂಡ್ ಬೀವರೇಜಸ್, ಕಟ್ಟಡ ಸಂ.440-ಎ, ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು | ಅಬಕಾರಿ ಅಬಕಾರಿ ಆಯುಕ್ತರು, ಬೆಂಗಳೂರು ಇವರ ಆದೇಶ ಸಂಖ್ಯೆ: ಇಸಿಬಿ/14/ಮೈಕ್ರೋಬ್ರೀವರಿ/ಮೈಸೂರು/2017-18, ದಿನಾಂಕ : 11-09-2017 |
| 86 | ಮೈಸೂರು ನಗರ ಜಿಲ್ಲೆ | | ಕಾರ್ ಬ್ರೀವರೀಸ್ ಪ್ರೈ.ಲಿ. ಮೈಕ್ರೋಬ್ರೀವರಿ ಸನ್ನದುದಾರರು, ನಂ.3, ಹುಣಸೂರು ಮುಖ್ಯ ರಸ್ತೆ, ಹಿನಕಲ್, ಮೈಸೂರು | ಅಬಕಾರಿ ಅಬಕಾರಿ ಆಯುಕ್ತರು, ಬೆಂಗಳೂರು ಇವರ ಆದೇಶ ಸಂಖ್ಯೆ: ಇಸಿಬಿ/17/ಮೈಕ್ರೋಬ್ರೀವರಿ/ಮೈಸೂರು/2018-19, ದಿನಾಂಕ : 18-03-2019 |
| 87 | ಕೋಲಾರ | 1 | ಶ್ರೀ ಬಿ ಎ ಭಾಸ್ಕರ್, ಸರ್ವೆ ನಂ 66, ಪ್ಲಾಟ್ ನಂ:AM-P5, ನರಸಾಪುರ ಕೈಗಾರಿಕಾ ಪ್ರದೇಶ, ಕರಿನಾಯಕನಹಳ್ಳಿ ಗ್ರಾಮ, ಮಾಲೂರು ತಾಲ್ಲೂಕು | EXCISE-18015/32/2025-26 date 22-07-2025 |
| | ಒಟ್ಟು | 87 | | |

ಅಇ 35 ಇಎಲ್‌ಕ್ಯೂ 2026